# ಕೆ.ಸಿ.ಡಿ. ಸಮಾಚಾರ

ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

KCD JOURNALISM CLUB DHARWAD

ಕರ್ನಾಟಕ ಮಹಾವಿದ್ಯಾಲಯ ಧಾರವಾಡ 100 Years Centenary Celebration 2017-18 KARNATAK COLLEGE DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ:16 ಸಂಪುಟ:3 ಪುಟ:2

@KACD100 @Ksamachar Kcdsamachara@gmail.com Readers can view at Kcd2017.blogspot.in


## ಬೆಳಕು

ಅದೃಷ್ಟ ಎನ್ನುವುದು ನೀವು ಹರಿಸೋ ಬೆವರಿಗೆ ಸಿಗುವ ಬೋನಸ್. ಹೆಚ್ಚು ಪರಿಶ್ರಮಪಡುವವರೇ ಹೆಚ್ಚು ಅದೃಷ್ಟಶಲಿಗಳು.

–ರೇಕ್ರಾಕ್ ಅಮೆರಿಕಾದ ಉದ್ಯಮಿ

## Unbelievable facts.



***India -183 Votes***

***Pakistan-1 Vote***

At United Nations India is Re-Elected as Principal Organ of UN environmental, Social and Economical issues for 3 years. India got 2nd highest votes out of 8 countries. India got 183 votes and Pakistan got just 1 vote. So, all cricket fans, this is bigger than Cricket.

## 'ನಗೆ ಹೊನಲು'




# ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಸಂಸ್ಥಾಪನಾ ದಿನಾಚರಣೆ



**ಹಿರಿಯ ಪತ್ರಕರ್ತ ನಾಡೋಜ ಪಾಟೀಲ ಪುಟ್ಟಪ್ಪ ಅವರು ಕರ್ನಾಟಕ ಮಹಾವಿದ್ಯಾಲಯದ 100ನೇ ಸಂಸ್ಥಪನಾ ದಿನಾಚರಣೆಯ ಕಾರ್ಯಕ್ರಮದ ನಿಮಿತ್ತ ಕಾಲೇಜಿನ ಆವರಣದಲ್ಲಿರುವ ಸಂಸ್ಥಾಪಕರ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದ ಸಂದರ್ಭದ ಚಿತ್ರದಲ್ಲಿ ಡಾ. ಜಿ. ಎಚ್ ಮಳಿಮಠ, ತಿಂ. ಬೆಲ್ಲದ, ಡಾ. ಅರುಣಾ ಹಳ್ಳಕೇರಿ ಡಾ ರಾಜೇಶ್ವರಿ ಮಹೇಶ್ವರಯ್ಯ, ಮೌಲ್ಯಮಾಪನ ಕುಲಸಚಿವ ಪ್ರೊ. ನಿಜಲಿಂಗಪ್ಪ ಮಟ್ಟಿಹಾಳ್, ಸಿ.ಎಫ್ ಮೂಲಿಮನಿ, ಡಾ ಮಲ್ಲಿಕಾರ್ಜುನ ತರ್ಲಗಟ್ಟಿ ಮತ್ತು ಡಾ. ಚಾಕಲಬ್ಬಿ ಅವರನ್ನು ಕಾಣಬಹುದು.**

ಕರ್ನಾಟಕ ಕಾಲೇಜು ಭಾರತದ ಸ್ವತಂತ್ರ ಸಂಗ್ರಾಮದಲ್ಲಿ ಭಾಗವಹಿಸಲು ಮತ್ತು ಹೋರಾಟದ ಕಿಚ್ಚನ್ನು ಹಚ್ಚಿಸುವಲ್ಲಿ ನನಗೆ ಸ್ಪೂರ್ತಿಯಾಗಿದೆ ಎಂದು ಹಿರಿಯ ಪತ್ರಕರ್ತ ನಾಡೋಜ ಪಾಟೀಲ ಪುಟ್ಟಪ್ಪ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಾಲೇಜಿನ ಫ್ಯಾರೆನ್ ಸಭಾಂಗಣದಲ್ಲಿ ಆಯೋಜಿಸಿದ ಕರ್ನಾಟಕ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ 100ನೇ ಸಂಸ್ಥಪನಾ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕರ್ನಾಟಕ ಕಾಲೇಜು ಸ್ಥಾಪನೆಯಲ್ಲಿ ರೊದ್ದ ಶ್ರೀನಿವಾಸರಾಯರು. ಅರಟಾಳ ರುದ್ರಗೌಡರು ಮತ್ತು ಸಿದ್ದಪ್ಪ ಕಂಬಳಿಯವರ ಕೂಡುಗೆ ಅಪಾರವಾಗಿದೆ ಎಂದ ಅವರು ಆಗಿನ ಕಾಲದಲ್ಲಿ ಕಾಲೇಜು ಸ್ಥಾಪನೆಗೆ ಬೇಕಾದ ಹಣವನ್ನು ಸಂಗ್ರಹಿಸುವದು ಬಹಳ ಕಷ್ಟವಾಗಿದ್ದ ಕಾಲದಲ್ಲಿ ಜನರಿಂದ ದೇಣಿಗಿ ಸಂಗ್ರಹಿಸಿ ಕಾಲೇಜು ಸ್ಥಾಪಿಸಿ ಉತ್ತರ ಕರ್ನಾಟಕದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ದೊರಕುವಂತೆ ಮಾಡಿದ ಮಹಾತ್ಮರು ಆದ್ದರಿಂದ ಇಂದು ನಾವೆಲ್ಲರು ಅವರನ್ನು ನೆನೆಯುವದು ಕರ್ತವ್ಯ ಎಂದರು. ಕರ್ನಾಟಕ ಕಾಲೇಜು ಸ್ಥಾಪನೆಯಲ್ಲಿ ಒಬ್ಬರಾದ ಸರ್ ಸಿದ್ದಪ್ಪ ಕಂಬಳಿಯವರ ಕೂಡುಗೆ ವಿಶಿಷ್ಟ್ಯವಾದದ್ದು, ಇವರು ಒಬ್ಬ ನುರಿತ ವಕೀಲರಾಗಿ ಮುಂಬಯಿ ಪ್ರಾಂತ್ಯದಲ್ಲಿ ಹೆಚ್ಚು ಜನಪ್ರಿಯ ರಾಗಿದ್ದರಲ್ಲದೆ ಆಗಿನ ಮಹಾರಾಷ್ಟ್ರ ಪ್ರಾಂತ್ಯದಲ್ಲಿ ಶಿಕ್ಷಣ ಮಂತ್ರಿಯಾಗಿ ಅದರ ಜತೆಗೆ ಆರು ವಿವಿಧ ಖಾತೆಗಳನ್ನು ನಿರ್ವಹಿಸುತ್ತಿದ್ದರು ಎಂದ ಅವರು ಸರ್ ಸಿದ್ದಪ್ಪ ಕಂಬಳಿ ಅವರು ಹಿಂದುಳಿದ ವರ್ಗದ ಜನರ ಹಿತಕಾಪಡುವ ಉದ್ದೇಶದಿಂದ ಅವರು ಎಲ್ಲರಿಗೂ ಶಿಕ್ಷಣ ಸಿಗಬೇಕು ಮತ್ತು ಈ ನನ್ನ ಜನ ವಿದ್ಯಾವಂತರಾಗಬೇಕು ಎಂದು ಅಭಿಲಾಷೆ ಹೊಂದಿದ್ದರಿಂದ ಅವರಿಗೆ ಕರ್ನಾಟಕ ಕಾಲೇಜು ಸ್ಥಾಪನೆಗೆ ಸ್ಫೂರ್ತಿ ದೊರೆಯಲು ಕಾರಣ ಎಂದ ವಿವರಿಸಿದರು.

ಇತಿಹಾಸವನ್ನು ನಾವು ಪರಿಗಣಿಸಿದಾಗ ಕರ್ನಾಟಕ ಉದಯಕ್ಕೆ ಮತ್ತು ಏಕೀಕರಣದ ಸಂದರ್ಭದಲ್ಲಿ ಉತ್ತರ ಕರ್ನಾಟಕ ಭಾಗದ ಜನರ ಕೂಡುಗೆ ಅಧಿಕವಾಗಿದ್ದು,ಇಂದು ನಿರಂತರವಾಗಿ ಉತ್ತರ ಕರ್ನಾಟಕವನ್ನು ಎಲ್ಲ ಸರಕಾರಗಳು ಕಡೆಗಣಿಸುತ್ತಾ ಬಂದಿದ್ದು, ಇದರಿಂದ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂಬ ಪ್ರಾದೇಶಿಕ ಅಸಮಾನತೆ ನಿರಂತರವಾಗಿ ಹೆಚ್ಚುತ್ತಲಿದೆ ಎಂದು ವಿಷಾದಿಸಿದರು. ಇಂದಿನ ರಾಜಕೀಯ ವ್ಯವಸ್ಥೆ ತೀರಾ ಹದಗೇಟ್ಟಿದ್ದು, ರಾಜಕಾರಣಿಗಳಲ್ಲಿ ಹಣ ಮತ್ತು ಸಂಪತ್ತಿನ ಸಂಗ್ರಹದ ವ್ಯಾಮೋಹ ಅಧಿಕವಾಗಿ ಬೆಳೆದಿದೆ. ಇದನ್ನು ಯಾರು ಪ್ರಶ್ನಿಸುವವರಿಲ್ಲ ಇದು ದುರದೃಷ್ಟಕರ ಸಂಗತಿ ಎಂದ ಅವರು ನಾವು ಪ್ರಜಾಪ್ರಭುತ್ವದಲ್ಲಿ ಬದಕುತ್ತಿದ್ದು, ನಾವು ಅನ್ಯಾಯ ಬ್ರಷ್ಟಾಚಾರದಂತಹ ಪ್ರಕರಣಗಳ ವಿರುದ್ದದ ಧ್ವನಿ ಎತ್ತಬೇಕಾಗಿದೆ ಆದ್ದರಿಂದ ಪ್ರಜಾಪ್ರಭುತ್ವ ಉಳಿಯಬೇಕಾದರೆ ನಾವು ನಾವು ನಮ್ಮ ಧ್ವನಿ ಮೂಲಕ ಪ್ರತಿಭಟಿಸುವಂತಹ ಮಾರ್ಗಗಳು ಅನಿವಾರ್ಯ ಎಂದ ಅವರು ಹಣದಿಂದ ಸಂತೋಷವನ್ನು ಕೂಂಡುಕೊಳ್ಳಲಾಗದು ಆದ್ದರಿಂದ ನಾವು ಎಲ್ಲವನ್ನು ಮೂಕ ಪ್ರೇಕ್ಷರಂತೆ ಕೂತರೆ ಪ್ರಜಾಪ್ರಭುತ್ವವು ಅವನತಿ ಹಾದಿ ಹಿಡಿಯುತ್ತದೆ ಎಂದು ಎಚ್ಚರಿಸಿದರು. ಕಾರ್ಯಕ್ರಮದಲ್ಲಿ ರೋದ್ದ ಶ್ರೀವಾಸರಾಯರ ಬಗ್ಗೆ ಉಪನ್ಯಾಸ ನೀಡಿದ ನಗರದ ಸಾಹಿತಿ ಹರ್ಷ ಡಂಬಳ ಮಾತನಾಡಿ ಕನ್ನಡ ಭಾಷೆ ಬೆಳವಣಿಗೆಗೆ ರೂದ್ದ ಶ್ರೀನಿವಾಸ ರಾಯರ ಕೂಡುಗೆ ಅಪಾರವಾಗಿದ್ದು, ಅವರು ಒಬ್ಬ ಉತ್ಸಾಹಿ ನಿರಂತರ ಅಧ್ಯಯನ ಶೀಲತೆ ಬೇಳಿಸಿಕೂಂಡಿದ್ದ ವ್ಯಕ್ತಿಯಾಗಿದ್ದ ಅವರು ಕರ್ನಾಟಕ ಕಾಲೇಜು ಸ್ಥಾಪನೆಯ ಸಲುವಾಗಿ ಅವರು ತಾವು ನಿರ್ವಹಿಸುತ್ತಿದ್ದ ಪ್ರಾಚಾರ್ಯರ ಹುದ್ದೆಗೆ ರಾಜಿನಾಮೆ ನೀಡಿ ಅರಟಾಳ ರುದ್ರಗೌಡರ ಜತೆ ಕೈಜೋಡಿಸಿದರು ಎಂದು ವಿವರಿಸಿದ ಅವರು ರೂದ್ದ ಶ್ರೀನಿವಾಸ ಅವರನ್ನು ಆಗಿನ ಬ್ರಿಟೀಷ್ ಸರಕಾರವು ಅವರ ಸಾಧನೆಯನ್ನು ಗಮನಿಸಿ ಅವರಿಗೆ ರಾವ್‌ಬಹದ್ದೂರ್ ಮತ್ತು ದಿವಾನ್ ಬಹದ್ದೂರ್ ಎಂಬ ಬೀರದನ್ನು ನೀಡಿತ್ತು ಎಂದ ಅವರು ರೂದ್ದ ಶ್ರೀನಿವಾಸ ರಾಯರು ಹೈಸ್ಕೂಲು ಶಿಕ್ಷಕರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದ ಅವರು ಶಿಕ್ಷಣ ಅಧಿಕಾರಿಯಾಗಿ ಮತ್ತು ಧಾರವಾಡದ ಟ್ರೇನಿಂಗ್ ಕಾಲೇಜಿನ ಪ್ರಾಚಾರ್ಯರಾಗಿ ಸೇವೆ ಸಲ್ಲಿಸದ್ದಾರೆ ಎಂದು ವಿವರಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಆಗಸ್ಟ್ 9 ರಿಂದ 11 ವರೆಗೆ ಕಾಲೇಜಿನಲ್ಲಿ ಸಂಸ್ಥಾಪಕರಾದ ರೋದ್ದ ಶ್ರೀನಿವಾಸರಾಯರು, ಅರಟಾಳ ರುದ್ರಗೌಡರು ಮತ್ತು ಸರ್ ಸಿದ್ದಪ್ಪ ಕಂಬಳಿ ಅವರ ಕುರಿತು ವಿಶೇಷ ಉಪನ್ಯಾಸ ಮಾಲಿಕೆಯನ್ನು ನೂರರ ಪ್ರಾಯದ ವರ್ಷಾಚರಣೆಯ ಸಂದರ್ಭದಲ್ಲಿ 100ನೇ ದಿನದ ಸಂಸ್ಥಾಪನಾ ದಿನಾಚರಣೆಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲು ನಿರ್ಧರಿಸಿದ್ದು, ಈ ನಿಟ್ಟಿನಲ್ಲಿ ಈ ಕಾಲೇಜಿನಲ್ಲಿ ಕಲಿತಂತಹ ಹಳೆಯ ವಿದ್ಯಾರ್ಥಿಗಳು ಮತ್ತು ಹೂರಾಟಗಾರ ಹಾಗೂ ಬರಹಗಾರರ ಕುರಿತು ಗ್ರಂಥ ರೂಪದಲ್ಲಿ ಪ್ರಕಟಿಸುವದು ಮತ್ತು ಕಾಲೇಜಿನ ಸ್ಥಾಪನೆ ಕಾರಣಿಭೂತರಾದ ಮಹನೀಯರ ಕುರಿತು 'ಪ್ರಾತಸ್ಮರಣಿ' ಎಂಬ ಗ್ರಂಥವನ್ನು ಪ್ರಕಟಿಸುವದರ ಜತೆಗೆ ಇಲ್ಲಿಯ ಹಳೆಯ ವಿದ್ಯಾರ್ಥಿಗಳ ಸಲಹೆ ಮತ್ತು ಅವರ ಅನಿಸಿಕೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಆಲೋಚನೆ ಇದೆ ಎಂದು ಶತಮಾನೋತ್ಸವದ ವರ್ಷಾಚರಣೆಯ ಸಂಭ್ರಮದ ರೂಪರೇಷೆಗಳನ್ನು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೋ. ನಿಜಲಿಂಗಪ್ಪ ಮಟ್ಟಿಹಾಳ್ ಮಾತನಾಡಿ ಕರ್ನಾಟಕ ಮಹಾವಿದ್ಯಾಲಯವು ಶತಮಾನೋತ್ಸದ ವರ್ಷಾಚರಣೆಯ ಸಂಭ್ರಮದಲ್ಲಿ ಇದ್ದು, ಈ ಸಂಭ್ರಮವನ್ನು ಕೇವಲ ಸಂಭ್ರಮವಾಗದೆ, ಅರ್ಥಪೂರ್ಣವಾಗಿ ಜ್ಞಾನ ದಾಸೋಹ ರೀತಿಯಲ್ಲಿ ವರ್ಷಪೂರ್ತಿ ನಡೆಯಬೇಕು ಅದಕ್ಕೆ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಲಹೆಗಳನ್ನು ಪಡೆದು ಯೋಜನೆ ರೂಪಿಸಿ ಎಂದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಕಾಲೇಜಿನ ಆವರಣದಲ್ಲಿರುವ ಸಂಸ್ಥಾಪಕರ ಪ್ರತಿಮೆಗಳಿಗೆ ನಾಡೋಜ ಡಾ ಪಾಟೀಲ ಪುಟ್ಟಪ್ಪ ಕವಿವಿ ಮೌಲ್ಯಮಾಪನ ಕುಲಸಚಿವ ನಿಜಲಿಂಗಪ್ಪ ಮಟ್ಟಿಹಾಳ್ ಸೇರಿದಂತೆ ಮೂರು ಕಾಲೇಜಿನ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ , ಡಾ ಸಿ.ಎಫ್.ಮೂಲಿಮನಿ ಮತ್ತು ಡಾ. ಮಲ್ಲಿಕಾರ್ಜುನ ತರ್ಲಗಟ್ಟಿ ಅವರು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕವಿವಿ ಸಿಂಡಿಕೇಟ್ ಸದಸ್ಯ ದಿಲೀಪ ಗೋತ್ರಾಳೆ, ಕರ್ನಾಟಕ ಕಲಾ, ವಿಜ್ಞಾನ ಮತ್ತು ಸಂಗೀತ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ , ಡಾ ಸಿ.ಎಫ್.ಮೂಲಿಮನಿ ಮತ್ತು ಡಾ. ಮಲ್ಲಿಕಾರ್ಜುನ ತರ್ಲಗಟ್ಟಿ ವೇದಿಕೆ ಮೇಲಿದ್ದರು. ಕಾರ್ಯಕ್ರಮದಲ್ಲಿ ವಿಮರ್ಶಕ ಗಿರಡ್ಡಿ ಗೋವಿಂದರಾಜ, ಕರ್ನಾಟಕ ಮಹಾವಿದ್ಯಾಲಯದ ಕಲಾ, ವಿಜ್ಞಾನ, ಸಂಗೀತ, ವಾಣಿಜ್ಯ ಮತ್ತು ವ್ಯವಹಾರ ಮತ್ತು ವಿವಿಧ ಸ್ನಾತಕೋತ್ತರ ವಿಭಾಗಗಳ ಪ್ರಾಧ್ಯಾಪಕರ ವೃಂದ, ಕಾಲೇಜಿನ ಜಿಮಖಾನದ ಕಾರ್ಯಾಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಮತ್ತು ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಜರಿದ್ದರು. ಕಾರ್ಯಕ್ರಮವನ್ನು ಕರ್ನಾಟಕ ಕಲಾ ಕಾಲೇಜಿನ ಜಿಮಖಾನಾದ ಕಾರ್ಯಾಧ್ಯಕ್ಷರಾದ ಅರುಣಾ ಹಳ್ಳಿಕೇರಿ ನಿರೂಪಿಸಿದರು. ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಜಿ.ಎಚ್. ಮಳಿಮಠ ವಂದಿಸಿದರು.

# ಕೆಸಿಡಿ ಸ್ಥಾಪನೆಯಲ್ಲಿ ಅರಟಾಳ ರುದ್ರಗೌಡರ ಪಾತ್ರ ಮಹತ್ವದ್ದು: ಡಾ. ಗುರುದೇವಿ ಹುಲ್ಲೆಪ್ಪನವರಮಠ




**ಬೆಳಗಾವಿಯ ಲಿಂಗರಾಜು ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ ಗುರುದೇವಿ ಹುಲೆಪ್ಪನವರಮಠ ಅವರು ಕರ್ನಾಟಕ ಕಾಲೇಜಿನ ಫ್ಯಾರೇನ್ ಸಭಾಂಗಣದಲ್ಲಿ ಆಯೋಜಿಸಿದ ಕರ್ನಾಟಕ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ 100ನೇ ಸಂಸ್ಥಪನಾ ದಿನಾಚರಣೆಯ ಅಂಗವಾಗಿ ಹಮ್ಮಿಕೂಂಡ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿರುವದು. ಚಿತ್ರದಲ್ಲಿ ಕರ್ನಾಟಕ ಕಲಾ ಕಾಲೇಜಿನ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ, ಕವಿವಿಯ ಮಾಜಿ ಕುಲಸಚಿವರಾದ ಪ್ರೊ. ಎಮ್ ಎನ್ ಜೋಶಿ ಮತ್ತು ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಡಾ ಸಿ.ಎಫ್ ಮೂಲಿಮನಿ ಅವರನ್ನು ಕಾಣಬಹುದು.**

ಉತ್ತರ ಕರ್ನಾಟಕದ ಭಾಗದಲ್ಲಿ ಕರ್ನಾಟಕ ಕಾಲೇಜು ಸ್ಥಾಪನೆ ಕುರಿತಂತೆ ಬ್ರಿಟೀಷ್ ಅಧಿಕಾರಿಗಳಿಗೆ ಕಾಲೇಜು ಸ್ಥಾಪನೆಯ ಬಗ್ಗೆ ಮಹತ್ವವನ್ನು ತಿಳಿಸಿಕೂಡುವಲ್ಲಿ ರಾವಬಹಾದ್ದೂರ ಅರಟಾಳ ರುದ್ರಗೌಡರು ಮಹತ್ವದ ಪಾತ್ರ ವಹಿಸಿದ್ದರು ಎಂದು ಬೆಳಗಾವಿಯ ಲಿಂಗರಾಜು ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ ಗುರುದೇವಿ ಹುಲೆಪ್ಪನವರಮಠ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಾಲೇಜಿನ ಫ್ಯಾರನ್ ಸಭಾಂಗಣದಲ್ಲಿ ಆಯೋಜಿಸಿದ ಕರ್ನಾಟಕ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ 100ನೇ ಸಂಸ್ಥಪನಾ ದಿನಾಚರಣೆಯ ಅಂಗವಾಗಿ ಹಮ್ಮಿಕೂಂಡ ಉಪನ್ಯಾಸ ಮಾಲೆಯಲ್ಲಿ ರಾವ ಬಹಾದ್ದೂರ ಅರಟಾಳ ರುದ್ರಗೌಡರ ಕುರಿತು ಮಾತನಾಡುತ್ತಿದ್ದರು.

ಕರ್ನಾಟಕ ಕಾಲೇಜು ಸ್ಥಾಪನೆಗೆ ಅರಟಾಳ ರುದ್ರಗೌಡರು ಮತ್ತು ರೊದ್ದ ಶ್ರೀನಿವಾರಾಯರು ಸೇರಿ 2. 64 ಲಕ್ಷ ರೂಪಾಯಿಗಳನ್ನು ಜನರಿಂದ ವಂತಿಗೆಯನ್ನು ಸಂಗ್ರಹಿಸಿ ಕರ್ನಾಟಕ ಕಾಲೇಜು ಸ್ಥಾಪನೆಗೆ ಅವಿರತ ಧೃಡ ಸಂಕಲ್ಪದೂಂದಿಗೆ ದುಡಿದ ಮಹಾತ್ಮರು ಎಂದ ಅವರು ಅರಟಾಳ ರುದ್ರಗೌಡರು ಕೇವಲ ಕರ್ನಾಟಕ ಕಾಲೇಜು ಮಾತ್ರವಲ್ಲದೆ ಈಗಿನ ಕೆ.ಎಲ್.ಇ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ಅವರು ಪ್ರಮುಖ ಕಾರಣಿಭೂತರು ಎಂದು ವಿವರಿಸದ ಅವರು. ಅರಟಾಳ ರುದ್ರಗೌಡರು ಒಬ್ಬ ನಿಷ್ಠ, ದಕ್ಷ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದರು ಸಾಮಾಜಿಕ ಕಳಕಳಿ ಹೂಂದಿದವರಾಗಿದ್ದುರು. ಅವರು ಅಷ್ಟೇ ಮಹಾನ್ ಲೇಖಕರು ಮತ್ತು ಬರಹಗಾರರಾಗಿದ್ದರು ಇವರು ಅನೇಕ ಕೃತಿ ಮತ್ತು ಲೇಖನಗಳನ್ನು ಸಂಪಾದಿಸಿದ್ದು ಅವು ಉತ್ತಮ ಕೃತಿಗಳಾಗಿವೆ ಎಂದರು.

ಅರಟಾಳ ರುದ್ರಗೌಡರ ಜೀವನ ಸರಳತೆಯಿಂದ ಕೂಡಿದ್ದು, ರುದ್ರಗೌಡರು ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ಡೈರಿ ಬರೆಯುವ ಹವ್ಯಾಸ ಇಟ್ಟುಕೂಂಡಿದ್ದ-ರಿಂದ ಇಂದು ನಮಗೆ ಅವರ ಜೀವನದ ಸಾಧನೆಗಳ ಕುರಿತು ಖಚಿತ ಮಾಹಿತಿ ದೂರಕುತ್ತದೆ ಎಂದರು. ಅರಟಾಳ ರುದ್ರಗೌಡರ ಬರಹಗಳಿಂದ ಮತ್ತು ಲೇಖನಗಳಿಂದ ಇಂದಿಗೂ ನಮ್ಮ ಮಧ್ಯ ಅವರು ಬೌದ್ಧಿಕವಾಗಿ ಇದ್ದಾರೆ. ಆದ-ರಿಂದ ಅವರ ಜೀವನದ ಸಾಧನೆ ಮತ್ತು ಅವರು ಬದುಕಿದ ರೀತಿ ಇಂದಿನ ಸಮಾಜಕ್ಕೆ ಮಾದರಿಯಾಗಿಬೇಕಿದೆ ಎಂದ ಅವರು ಅರಟಾಳ ರುದ್ರಗೌಡರು ತಮ್ಮ ಜೀವಿತ ಅವಧಿಯಲ್ಲಿ 81 ವರ್ಷ ಬದುಕಿದ್ದು, ಅವರು ಪ್ರಥಮ ಬಾರಿಗೆ ಲಿಂಗಾಯಿತ್ ಏಜ್ಯುಕೇಶನ್ ಫಂಡ್ ಸ್ಥಾಪಿಸಿ ಲಿಂಗಾಯಿತ ಸಮುದಾಯ ಜನರಿಗೆ ಶಿಕ್ಷಣ ದೊರಕುವ ಸಲುವಾಗಿ ಪ್ರಯತ್ನಿಸಿದರು. ಅವರು ಕರ್ನಾಟಕ ಲಿಂಗಾಯಿತ್ ಏಜ್ಯುಕೇಶನ್ ಸಂಸ್ಥೆಯನ್ನು ಸ್ಥಾಪನೆ ಮಾಡಿದ ಪ್ರಮುಖರಲ್ಲಿ ಒಬ್ಬರು ಎಂದರು.

ಈ ಉಪನ್ಯಾಸ ಮಾಲೆಯ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಾಜಿ ಕುಲಸಚಿವರಾದ ಪ್ರೋ. ಎಮ್. ಎನ್. ಜೋಶಿ ಮಾತನಾಡಿ ಈ ಕರ್ನಾಟಕ ಕಾಲೇಜಿನಲ್ಲಿ ಓದುವ ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ
ಸಾಮರ್ಥ್ಯ ಕುರಿತು ತಿಳಿದುಕೂಂಡು ನಮ್ಮಲ್ಲಿರುವ ದೋಷಗಳನ್ನು ಧನಾತ್ಮಕವಾಗಿ ಪರಿವರ್ತಿಸಿಕೂಂಡು ಮುನ್ನಡೆದಾಗ ಮಾತ್ರ ಜೀವನದಲ್ಲಿ ಸಾಧಿಸಬಹುದು ಎಂದರು ಕರ್ನಾಟಕ ಕಾಲೇಜು ಸ್ಥಾಪನೆಗೆ ಕಾರಣರಾದ ತ್ರಿಮೂರ್ತಿಗಳು ನಮ್ಮೆಲ್ಲರಿಗೂ ಮಾದರಿ ಆದ್ದರಿಂದ ಅವರ ಜೀವನ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೂಂಡರೆ ಏನನ್ನಾದರೂ ಸಾಧಿಸಲು ಸಾಧ್ಯ ಎಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ, ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಡಾ ಸಿ.ಎಫ್. ಮೂಲಿಮನಿ ಮತ್ತು ಹಿರಿಯ ಸಾಹಿತಿ ಹರ್ಷ ಡಂಬಳ ಹಾಗೂ ಕರ್ನಾಟಕ ಕಾಲೇಜಿನ ಕಲಾ ಮತ್ತು ವಿಜ್ಞಾನ ವಿಷಯದ ಎಲ್ಲ ಪ್ರಾಧ್ಯಾಪಕರು ವಿದ್ಯಾರ್ಥಿ,ವಿಧ್ಯಾರ್ಥಿನಿಯರು ಹಾಜರಿದ್ದರು. ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀಮತಿ ಡಾ ಎ.ಎಸ್ ಬೆಲ್ಲದ್ ಅತಿಥಿಗಳನ್ನು ಸ್ವಾಗತಿಸಿದರು, ಡಾ ವಿ.ಬಿ ಸ್ಥಾವರಮಠ ಅತಿಥಿಗಳನ್ನು ಪರಿಚಯಿಸಿದರು. ಕಾರ್ಯಕ್ರಮವನ್ನು ಡಾ. ಜಿ.ಎಚ್ ಮಳಿಮಠ ನಿರೂಪಿಸದರು. ಡಾ ಎಮ್ ಎನ್ ಮ್ಯಾಗೇರಿ ವಂದಿಸಿದರು.

# ಕೆಸಿಡಿ ಕೀರ್ತಿ ಹೆಚ್ಚಿಸುವಲ್ಲಿ ಸರ್ ಸಿದ್ದಪ್ಪ ಕಂಬಳಿಯವರ ಪಾತ್ರ ಅಭಿನಂದನೀಯ ಡಾ ವ್ಹಿ.ವ್ಹಿ. ಹೆಬ್ಬಳ್ಳಿ




**ನಗರದ ಕರ್ನಾಟಕ ಕಾಲೇಜಿನಲ್ಲಿ ಆಯೋಜಿಸಿದ 100ನೇ ಸಂಸ್ಥಾಪನಾ ದಿನಾಚರಣೆಯ ಉಪನ್ಯಾಸ ಮಾಲೆಯಲ್ಲಿ ಬೆಂಗಳೂರಿನ ಎಸ್ ನಿಜಲಿಂಗಪ್ಪ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಡಾ ವ್ಹಿ.ವ್ಹಿ. ಹೆಬ್ಬಳ್ಳಿ ಮಾತನಾಡುತ್ತಿರುವುದು. ಚಿತ್ರದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ, ಕವಿವಿ ಕುಲಪತಿಗಳಾದ ಪ್ರೋ. ಪ್ರಮೋದ ಗಾಯಿ, ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಡಾ ಸಿ.ಎಫ್.ಮೂಲಿಮನಿ ಮತ್ತು ಸಂಗೀತ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಮಲ್ಲಿಕಾರ್ಜುನ ತರಲಗಟ್ಟಿ ಅವರನ್ನು ಕಾಣಬಹುದು.**

ಕರ್ನಾಟಕ ಕಾಲೇಜು ಸ್ಥಾಪನೆಯಲ್ಲಿ ಅರಟಾಳ ರುದ್ರಗೌಡರು, ರೊದ್ದ ಶ್ರೀನಿವಾಸರಾಯರು ಅವರ ಜೊತೆಗೆ ಸರ್ ಸಿದ್ದಪ್ಪ ಕಂಬಳಿಯವರು ಸಹ ಕಾಲೇಜಿನ ಸ್ಥಾಪನಗೆ ಟೊಂಕ ಕಟ್ಟಿ ನಿಂತವರಲ್ಲಿ ಒಬ್ಬರು ಎಂದು ಬೆಂಗಳೂರಿನ ಎಸ್ ನಿಜಲಿಂಗಪ್ಪ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಡಾ ವ್ಹಿ.ವ್ಹಿ. ಹೆಬ್ಬಳ್ಳಿ ಅಭಿಪ್ರಾಯಪಟ್ಟರು ಅವರು ಕರ್ನಾಟಕ ಕಾಲೇಜಿನ ಫ್ಯಾರನ್ ಸಭಾಂಗಣದಲ್ಲಿ ಆಯೋಜಿಸಿದ ಕರ್ನಾಟಕ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ 100ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಹಮ್ಮಿಕೂಂಡ ಅಂತಿಮ ದಿನದ ಉಪನ್ಯಾಸ ಮಾಲೆಯಲ್ಲಿ ಸರ್ ಸಿದ್ದಪ್ಪ ಕಂಬಳಿಯವರ ಕುರಿತು ಮಾತನಾಡುತ್ತಿದ್ದರು. ಕರ್ನಾಟಕ ಮಹಾವಿದ್ಯಾಲಯವು ಸ್ಥಾಪನೆಗೂಂಡು ಕೆಲವು ದಿನಗಳ ನಂತರ ಹಣಕಾಸಿನ ಮುಗ್ಗಟ್ಟಿನ ಪರಿಸ್ಥಿತಿ ಎದು-ರಿಸಿದಾಗ ಆಗಿನ ಬ್ರಿಟೀಷ್ ಸರಕಾರವು ಕರ್ನಾಟಕ ಕಾಲೇಜನ್ನು ಮುಚ್ಚುವ ನಿರ್ಣಯ ಕೈಗೂಂಡಾಗ ಆಗಿನ ಬ್ರಿಟೀಷ್ ಸರಕಾರದಲ್ಲಿ ಮಂತ್ರಿಯಾಗಿದ್ದ ಸರ್ ಸಿದ್ದಪ್ಪ ಕಂಬಳಿಯವರು ತೀವ್ರ ಆಕ್ಷೇಪ ವ್ಯಕ್ತಪಡಿಸಿ ಕಾಲೇಜನ್ನು ಉಳಿಸಿದ ಕೀರ್ತಿ ಸರ್ ಸದ್ದಪ್ಪ ಕಂಬಳಿಯವರಿಗೆ ಸಲ್ಲುತ್ತದೆ ಎಂದು ಮಾರ್ಮಿಕವಾಗಿ ವಿವರಿಸದರು. ಸಿದ್ದಪ್ಪ ಕಂಬಳಿಯವರು ಕರ್ನಾಟಕ ಕಲಾ ವಿಭಾಗವು ಕರ್ನಾಟಕ ಕಾಲೇಜನಲ್ಲಿ ಪ್ರಾರಂಭವಾದ ನಂತರ ವಿಜ್ಞಾನ ವಿಭಾಗ ಪ್ರಾರಂಭಿಸಲು ಹೆಚ್ಚು ಆಸಕ್ತಿ ವಹಿಸಿದ್ದ ಸಿದ್ದಪ್ಪ ಕಂಬಳಿಯವರು ಮುಂಬಯಿಯ ಡೆಕ್ಕನ್ ಕಾಲೇಜಿನಿಂದ ಅಗತ್ಯವಾದ ಪ್ರಾಯೋಗಿಕ ಸಲಕರಣೆಗಳನ್ನು ರಾತ್ರೋರಾತ್ರಿ ತಂದರು ಕರ್ನಾಟಕ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ಪ್ರಾರಂಭಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ವಿವರಿಸಿದರು.

ಸಿದ್ದಪ್ಪ ಕಂಬಳಿಯವರ ಸಮಾಜ ಸೇವೆ ಮತ್ತು ಅವರಲ್ಲಿರುವ ದಲಿತಪರ ಮತ್ತು ಹಿಂದುಳಿದ ವರ್ಗಗಳ ಕಾಳಜಿಯನ್ನು ಗಮನಿಸಿದ ಆಗಿನ ಬ್ರಿಟಿಷ್ ಸರಕಾರವು ಸಿದ್ದಪ್ಪ ಕಂಬಳಿಯವರಿಗೆ 'ಸರ್' ಎನ್ನುವ ಬಿರದನ್ನು ನೀಡಿ ಗೌರವಿಸಿತು ಎಂದ ಉಲ್ಲೇಸಿದ ಅವರು ಸರ್ ಸದ್ದಪ್ಪ ಕಂಬಳಿಯವರ ತಮ್ಮ ತಾಯಿ ಮತ್ತು ಗುರುಗಳ ಮೇಲೆ ಅಪಾರ ಗೌರವ ಹೂಂದಿದ್ದರು ಎಂದರು.

ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಪ್ರಮೋದ ಗಾಯಿ ಮಾತನಾಡಿ ಕರ್ನಾಟಕ ಕಾಲೇಜಿನ ಸ್ಥಾಪನೆಗೆ ತಮ್ಮನ್ನೇ ತಾವು ಸಮರ್ಪಿಸಿಕೂಂಡ ಅರಟಾಳ ರುದ್ರಗೌಡರು, ರೂದ್ದ ಶ್ರೀನಿವಾಸ ರಾಯರು ಮತ್ತು ಸರ್ ಸಿದ್ದಪ್ಪ ಕಂಬಳಿಯವರ ಕುರಿತು ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ತಿಳಿದು ಕೊಳ್ಳುವದು ಅವಶ್ಯಕವಾಗಿದೆ ಆದ್ದರಿಂದ ಅಂತಹ ಮಹಾನ್ ಆದರ್ಶ ವ್ಯಕ್ತಿಗಳ ಸಾಧನೆ ಮತ್ತು ಅವರ ಬದುಕಿನ ಆದರ್ಶಗಳನ್ನು ಮೈಗೂಡಿಸಕೋಳ್ಳಬೇಕು ಎಂದರು ಶಿಕ್ಷಕರಾದವರು ವಿದ್ಯಾರ್ಥಿಗಳಿಗೆ ಪ್ರೀಯರಾಗಿ ತರಗತಿಗಳಿಗೆ ಪಾಠದ ಸಿದ್ದತೆಯಿಂದ ಹೋಗಿ ನಿಮ್ಮ ಕರ್ತವ್ಯಕ್ಕೆ ನ್ಯಾಯ ಸಲ್ಲಿಸಿ ಎಂದು ಶಿಕ್ಷಕರನ್ನು ಉಲ್ಲೇಖಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ 'ಮೀಸಲೆನಿ' ನಿನಾದ ವಾರ್ಷಿಕ ಪ್ರಕಟಣೆಯನ್ನು ಕವಿವಿ ಕುಲಪತಿಗಳಾದ ಪ್ರಮೋದ ಗಾಯಿ ಬಿಡುಗಡೆ ಗೊಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ, ಕರ್ನಾಟಕ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾದ ಡಾ ಸಿ.ಎಫ್.ಮೂಲಿಮನಿ ಮತ್ತು ಸಂಗೀತ ಮಹಾವಿದ್ಯಾಲಯದ ಪ್ರಾಚಾರ್ಯರಾದ ಮಲ್ಲಿಕಾರ್ಜುನ ತರಲಗಟ್ಟಿ ಹಾಜರಿದ್ದರು. ಸಮಾರಂಭದಲ್ಲಿ ಮೂರು ಮಹಾವಿದ್ಯಾಲಯಗಳ ಪ್ರಾಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳು ಉಪಸ್ಥಿತ-ರಿದ್ದರು. ಡಾ ಸಿ. ಎಫ್ ಮೂಲಿಮನಿ ಅತಿಥಿಗಳನ್ನು ಸ್ವಾಗತಿಸಿದರು. ಡಾ ವಿಶಾರದಾ ಅತಿಥಿಗಳನ್ನು ಪರಿಚಯಿಸಿದರು. ಕಾರ್ಯಕ್ರಮವನ್ನು ಡಾ ಎಮ್ ದಳಪತಿ ನಿರೂಪಿಸಿದರು. ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ವಂದಿಸಿದರು.

ಗೌರವ ಸಂಪಾದಕರು: ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ.ಪ್ರಭಾಕರ್ ಕಾಂಬಳೆ, ಡಾ.ರವೀಂದ್ರ ಜಲರೆಡ್ಡಿ, ವಿದ್ಯಾರ್ಥಿ ಸಂಪಾದಕರು: ಚೇತನ್,ನಿತಿನ್. ಪುಟ ವಿನ್ಯಾಸ: ಶ್ರೀಹರಿ.